## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ

## ಸಿ.ಸಿ.770/2025

| | | |
|---|---|---|
| ಸಾಕ್ಷಿದಾರರ ಹೆಸರು | : ಮಲ್ಲಮ್ಮ | ಪ್ರಾಸಾ-1 |
| ಗಂಡನ ಹೆಸರು | : ಚನ್ನಪ್ಪ | ಚಾಸಾ-1 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 07.03.2026. |
| ವಾಸಸ್ಥಳ | : ಹಾವೇರಿ | |

### :ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:

ಮೃತ ಚೆನ್ನಪ್ಪ ನನ್ನ ಗಂಡ. ಚಾಸಾ-4 ನನ್ನ ಮಗಳು ಮತ್ತು ಚಾಸಾ-3 ನನ್ನ ಮೊಮ್ಮಗಳು.

ದಿ.24.05.2004 ರಂದು ಕೊಟ್ಟಿಗೆಹಾರದಿಂದ ಹೊರನಾಡಿಗೆ ರಾ.8.30 ರ ಸಮಯದಲ್ಲಿ ಸರ್ಕಾರಿ ಬಸ್ ನಲ್ಲಿ ನಾನು, ಮೃತ ಚೆನ್ನಪ್ಪ, ಚಾಸಾ-3 ಮತ್ತು 4 ರವರು ಹೊರಟಿರುತ್ತೇವೆ. ಹಿರೇಬೈಲಿನ ಬಳಿ ನಾವು ಪ್ರಯಾಣಿಸುತ್ತಿದ್ದ ಬಸ್ ಹಂಪ್ ನ ಬಳಿ ಅತಿವೇಗದಿಂದ ಹೋದ ಕಾರಣ ಮೃತ ಚೆನ್ನಪ್ಪ ರವರು ಹಿಂದಿನ ಸೀಟ್ ನಲ್ಲಿ ಕುಳಿತಿದ್ದ ಕಾರಣ ಕೆಳಗೆ ಸೀಟಿನ ಅಡಿ ಸಿಲುಕಿಕೊಂಡಿರುತ್ತಾರೆ. ಅವರನ್ನು ಮೇಲೆ ಎತ್ತಿ ನೋಡಲಾಗಿ ಮೃತ ಚೆನ್ನಪ್ಪ ರವರಿಗೆ ಸೊಂಟದ ಭಾಗಕ್ಕೆ ಪೆಟ್ಟಾಗಿರುತ್ತದೆ. ಸದರಿ ಅಪಘಾತದ ಕಾರಣ ಮೃತ ಚೆನ್ನಪ್ಪ ರವರಿಗೆ ಎದ್ದು ಓಡಾಡಲು ಸಾದ್ಯವಾಗುತ್ತಿರಲಿಲ್ಲ ಅವರನ್ನು ನಾವೇ ಕರೆದುಕೊಂಡು ಹೋಗಬೇಕಾಗಿತ್ತು. ನಂತರ ಅದೇ ಬಸ್ ನಲ್ಲಿ ಮೃತ ಚೆನ್ನಪ್ಪ ರವರನ್ನು ಕಳಸ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ನಂತರ ಚಾಸಾ-18 ರವರಿಗೆ ವಿಷಯವನ್ನು ತಿಳಿಸಿರುತ್ತೇವೆ. ನಂತರ ಚಾಸಾ-18 ರವರು ಊರಿನಿಂದ ಬಂದ ಮೇಲೆ ಪೋಲಿಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇವೆ. ನಂತರ ಪೋಲಿಸರು ಅಪಘಾತ ಸಂಭವಿಸಿದ ಸ್ಥಳಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ, ಸದರಿ ಸಮಯದಲ್ಲಿ ಪೋಲಿಸರು ಮಹಜರ್ ಕ್ರಮವನ್ನು ಜರುಗಿಸಿ ನಮ್ಮ ಸಹಿಯನ್ನು ಪಡೆದು ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಸಮಯದಲ್ಲಿ ನಾನು, ಪೋಲಿಸರು, ಚಾಸಾ-3, 4 ಮತ್ತು 18 ರವರು ಹಾಜರಿದ್ದೆವು.

ನಂತರ ಕಳಸದ ಆಸ್ಪತ್ರೆಯಿಂದ ಹಾವೇರಿಗೆ ಕರೆದುಕೊಂಡು ಹೋಗಿರುತ್ತೇವೆ, ನಂತರ ಅಲ್ಲಿನ ಆಸ್ಪತ್ರೆಯವರು ಕಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ಕಿಮ್ಸ್ ಆಸ್ಪತ್ರೆಯಲ್ಲಿ ಚೆನ್ನಪ್ಪ ರವರು ಸರಿ ಹೋಗುವುದಿಲ್ಲ ಎಂದು ತಿಳಿಸಿ ಮನೆಗೆ ಕರೆದುಕೊಂಡು ಹೋಗುವಂತೆ ಹೇಳಿರುತ್ತಾರೆ. ನಂತರ ಮತ್ತೆ ಹಾವೇರಿಯ ಆಸ್ಪತ್ರೆಗೆ ಕರೆದುಕೊಂಡು ಹೋದರು ಚೆನ್ನಪ್ಪ ರವರು ಮೃತ ಪಟ್ಟಿರುತ್ತಾರೆ.

ಸಾಕ್ಷಿಯು ದಿ.26.05.2024 ರಂದು ನೀಡಿದ ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.27.05.2024 ರಂದು ಬರೆದ ಮಹಜರ್ ಪ್ರತಿ ಮತ್ತು ಅದರಲ್ಲಿ

ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಪ್ರತಿಯನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಫೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸಿದ್ದು, ಸದರಿ ಫೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ-4, ಕಲಂ 65 ಬಿ ರಡಿಯ ದೃಢೀಕೃತ ಪ್ರತಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.25.05.2024 ರಂದು ನಾವು KA-42-F-2136 ರ ಸಂಖ್ಯೆಯ ಸರ್ಕಾರಿ ಬಸ್ ನಲ್ಲಿ ನಾವು ಪ್ರಯಾಣಿಸುತ್ತಿದ್ದೆವು ಎಂದರೆ ಸರಿ. ನಂತರ ದಿ.26.05.2024 ರಂದು ಚಾಸಾ-18 ರವರು ಊರಿನಿಂದ ಬಂದ ನಂತರ ದೂರನ್ನು ನೀಡಿರುತ್ತೇವೆ ಎಂದರೆ ಸರಿ. ನಂತರ ದಿ.27.05.2024 ರಂದು ನಾನು ಸ್ಥಳವನ್ನು ತೋರಿಸಿದ ಮೇರೆಗೆ ಪೋಲಿಸರು ಮಹಜರ್ ಕ್ರಮವನ್ನು 12.00 ರಿಂದ 1.00 ಗಂಟೆಯವರೆಗೂ ಬರವಣಿಗೆ ಮಾಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ಬಸ್ ನ್ನು ಚಲಾಯಿಸುತ್ತಿದ್ದರು ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾವು ಯಾವ ದಿನಾಂಕದಂದು ಕೊಟ್ಟಿಗೆಹಾರದಿಂದ ಬಸ್ ನ್ನು ಹತ್ತಿರುತ್ತೇವೆ ಎಂದು ಹೇಳಲು ಸಾದ್ಯವಿಲ್ಲ. ರಾ.8.30 ರ ಸಮಯಕ್ಕೆ ಕೊಟ್ಟಿಗೆಹಾರದಿಂದ ಬಸ್ ನ್ನು ಹತ್ತಿರುತ್ತೇವೆ. ನಾನು, ಮೃತ ಚೆನ್ನಪ್ಪ, ಚಾಸಾ-3 ಮತ್ತು 4 ರವರು ಬಸ್ ನಲ್ಲಿ ಟಿಕೆಟ್ ನ್ನು ತೆಗೆದುಕೊಂಡಿರುತ್ತೇವೆ. ನಾವು ತೆಗೆದುಕೊಂಡ ಟಿಕೆಟ್ ನ್ನು ಪೋಲಿಸರಿಗೆ ನೀಡಿರುವ ನೆನಪಾಗುತ್ತಿಲ್ಲ. ಕೊಟ್ಟಿಗೆಹಾರದಿಂದ ತಿರುವ ರಸ್ತೆ ಇರುತ್ತದೆ ಎಂದರೆ ಸರಿ. ಆದ ಕಾರಣ ವಾಹನಗಳನ್ನು ನಿಧಾನವಾಗಿ ಚಲಾಯಿಸಬೇಕು ಎಂದರೆ ಸರಿ. ಆದ ಕಾರಣ ನಾವು ಬಸ್ ನಲ್ಲಿ ಕೂರುವಾಗ ಜಾಗ್ರತೆಯಿಂದ ಕೂರಬೇಕು ಎಂದರೆ ಸರಿ. ನಾನು ಚಾಲಕರ ಸೀಟಿನ ಪಕ್ಕದಲ್ಲಿ ನಿಂತಿರುತ್ತೇನೆ. ಅಕ್ಕ ಪಕ್ಕದಲ್ಲಿ ಚಾಸಾ-3 ಮತ್ತು 4 ರವರನ್ನು ಕೂರಿಸಿಕೊಂಡು ಮೃತ ಚೆನ್ನಪ್ಪ ರವರು ಮದ್ಯದಲ್ಲಿ ಕುಳಿತಿರುತ್ತಾರೆ. ಅಪಘಾತ ಸಂಭವಿಸಿದ ಸಮಯದಲ್ಲಿ ರಾತ್ರಿಯಾದ ಕಾರಣ ಬಸ್ ಯಾವ ವೇಗದಲ್ಲಿ ಚಲಾಯಿಸಲಾಗುತ್ತಿತ್ತು ಎಂದು ತಿಳಿದಿರುವುದಿಲ್ಲ. ನಾನು ಬಸ್ ನ ಹಿಂಬದಿ ಬಾಗಿಲಿನಿಂದ ಹತ್ತಿರುತ್ತೇನೆ. ಬಸ್ ನ್ನು ಹತ್ತಿ 2 ರಿಂದ 3 ಸೀಟಿನ ಮುಂದೆ ಹೋಗಿ ನಿಂತಿರುತ್ತೇನೆ. ಆ ದಿನ ಬಸ್ ನ್ನು ಯಾರು ಚಲಾಯಿಸುತ್ತಿದ್ದರು ಎಂದು ನಾನು ನೋಡಿರುವುದಿಲ್ಲ. ನಾನು ಚೆನ್ನಪ್ಪ ರವರು ಕೆಳಗೆ ಬಿದ್ದು ಕೂಗಿಕೊಂಡ ನಂತರ ನೋಡಿರುತ್ತೇನೆ ಎಂದರೆ ಸರಿ.

ನಂತರದಲ್ಲಿಯೇ ಚೆನ್ನಪ್ಪ ರವರು ಕೆಳಗೆ ಬಿದ್ದಿರುವುದು ನನಗೆ ತಿಳಿದಿರುತ್ತದೆ ಎಂದರೆ ಸರಿ.

ಚೆನ್ನಪ್ಪ ರವರು ಕೆಳಗೆ ಬಿದ್ದಿದ್ದನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ಅವರು ಕೆಳಗೆ ಬಿದ್ದು ಕೂಗಿಕೊಂಡ ನಂತರ ನಾನೇ ಹೋಗಿ ಎಬ್ಬಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಬಸ್ ನ ಹಿಂಬದಿಯ ಸೀಟಿನಲ್ಲಿ ಚಾಸಾ-3, 4 ಮತ್ತು ಚೆನ್ನಪ್ಪ ರವರನ್ನು ಹೊರತುಪಡಿಸಿ ಇನ್ನು ಇಬ್ಬರು ಹೆಣ್ಣುಮಕ್ಕಳು ಕುಳಿತಿದ್ದರು. ಸದರಿಯವರು ನಮ್ಮ ಕುಟುಂಬಕ್ಕೆ ಸೇರಿದವರಲ್ಲ. ಆ ದಿನ ಅಪಘಾತ ಸಂಭವಿಸಿದ ಸಮಯದಲ್ಲಿ ಕತ್ತಲೆ ಆವರಿಸಿತ್ತು ಎಂದರೆ ಸರಿ. ಆ ದಿನ ಕತ್ತಲೆಯಾದ ಕಾರಣ ಯಾವ ರೀತಿ ಹೋಗಿರುತ್ತೇವೆ ಎಂದು ತಿಳಿದಿರುವುದಿಲ್ಲ ಎಂದರೆ ಸರಿ. ಆ ದಿನ ಚೆನ್ನಪ್ಪ ರವರನ್ನು ಬಸ್ ನವರೇ ಆಸ್ಪತ್ರೆಗೆ ಚಿಕಿತ್ಸೆಗೆಂದು ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ಸಂಭವಿಸಿದ ದಿನ ನಾವು ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ ನಾನು ಸಹಿಯಷ್ಟೇ ಮಾಡಿರುತ್ತೇನೆ. ನಾನು ನಮ್ಮ ವಾಹನದಲ್ಲಿ ಮಹಜರ್ ಸ್ಥಳಕ್ಕೆ ಹೋಗಿರುತ್ತೇನೆ. ನಾವು ಊರಿನಿಂದ ಕರೆಸಿದ ವಾಹನದಲ್ಲಿ ನಾನು, ಚಾಸಾ-3, 4 ಮತ್ತು ಪೋಲಿಸರು ಮಹಜರ್ ಸ್ಥಳಕ್ಕೆ ಹೋಗಿರುತ್ತೇವೆ. ಕೊಟ್ಟಿಗೆಹಾರದಿಂದ ನಾನು ಯಾವ ಡಿಪೋ ಬಸ್ ಹತ್ತಿರುತ್ತೇನೆ ಎಂದು ಹೇಳಲು ಸಾದ್ಯವಿಲ್ಲ. ಅದೇ ರೀತಿ ಅದರ ಸಂಖ್ಯೆಯು ನನಗೆ ತಿಳಿದಿರುವುದಿಲ್ಲ.

ಅದೇ ರೀತಿ ನಿಪಿ-2 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಪಿ-2 ಕ್ಕೆ ನಾನು, ಚಾಸಾ-3 ಮತ್ತು 4 ರವರು ಸಹಿ ಮಾಡಿರುತ್ತೇವೆ. ಮೃತ ಚೆನ್ನಪ್ಪ ರವರ ಮರಣದ ನಂತರ ಹಣವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಹಾವೇರಿಯಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಚೆನ್ನಪ್ಪ ರವರಿಗೆ ಇದ್ದ ಬೇರೆ ರೋಗಕ್ಕೆ ಚಿಕಿತ್ಸೆ ಕೊಡಿಸಲಾಗಿತ್ತು ಎಂದರೆ ಸರಿ. ಕೊಟ್ಟಿಗೆಹಾರದಿಂದ ಹೊರನಾಡಿಗೆ ಹೋಗುವ ಸಮಯದಲ್ಲಿ ಅಪಘಾತ ಸಂಭವಿಸಿ ನಮಗೆ ತೊಂದರೆಯಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾನು, ಚಾಸಾ-3 ಮತ್ತು 4 ರವರು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಅಪಘಾತದ ನಂತರ ಮೃತ ಚೆನ್ನಪ್ಪ ರವರಿಗೆ ಚಿಕಿತ್ಸೆ ಕೊಡಿಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರವನ್ನು ಕೋರಿ ಸಲ್ಲಿಸಿರುವ ಅರ್ಜಿಗೆ ಸಹಾಯವಾಗುವಂತೆ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.